Teachingninja.in

Latest Govt Job updates

Private Job updates

Free Mock tests available

Visit - teachingninja.in

Teachingninja.in

# KPSC

## Previous Year Paper

### SDA (GK-Kannada)

### 19 Sept 2021

Teachingninja.in

**ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**ಪ್ರಶ್ನೆಪತ್ರಿಕೆ ವರ್ಷನ್ ಕೋಡ್**

**D**

**ವಿಷಯ ಸಂಕೇತ : 413**

**ಸಾಮಾನ್ಯ ಜ್ಞಾನ (ಪತ್ರಿಕೆ–III)**

**ಪ್ರಶ್ನೆಪುಸ್ತಿಕೆಯ ಸಂಖ್ಯೆ**

**ಗರಿಷ್ಠ ಸಮಯ : 1 ½ ಗಂಟೆಗಳು** **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡು ಬಂದಲ್ಲಿ ನಿಮ್ಮ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆಪತ್ರಿಕೆಯೊಂದಿಗೆ ಬದಲಾಯಿಸಿಕೊಳ್ಳತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಪ್ರಶ್ನೆಪತ್ರಿಕೆಯಲ್ಲಿನ ಪುಟಗಳನ್ನು ಸರಿಯಾಗಿ ಪರಿಶೀಲಿಸದೇ ದೋಷಪೂರಿತ ಪ್ರಶ್ನೆಪತ್ರಿಕೆಯನ್ನೇ ಉಪಯೋಗಿಸಿದಲ್ಲಿ ಇದಕ್ಕೆ ಅಭ್ಯರ್ಥಿಯೇ ಹೊಣೆಗಾರರಾಗಿರುತ್ತಾರೆ.
2. OMR ಉತ್ತರ ಹಾಳೆಯಲ್ಲಿ ಮತ್ತು ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು. ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ.
3. **ಅಭ್ಯರ್ಥಿಯ ಪ್ರಶ್ನೆಪತ್ರಿಕೆಯ ಶ್ರೇಣಿಯು ತಮ್ಮ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡು ಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ತಮ್ಮ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನೇ ಪಡೆಯತಕ್ಕದ್ದು.**
4. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು ಇರುತ್ತವೆ.
5. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲಿಯೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪತ್ರಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| | | | | | | |

6. ಈ ಪ್ರಶ್ನೆಪತ್ರಿಕೆಯು **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಆಯ್ಕೆಗಳನ್ನು ಒಳಗೊಂಡಿರುತ್ತದೆ. ನೀವು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು. ಒಂದು ವೇಳೆ ಒಂದಕ್ಕಿಂತ ಹೆಚ್ಚಿನ ಉತ್ತರಗಳನ್ನು ಎನ್‌ಕೋಡ್ ಮಾಡಿದಲ್ಲಿ ಆ ಉತ್ತರಗಳನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
7. ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಎರಡೂ ಭಾಷೆಗಳಲ್ಲಿರುತ್ತವೆ. ಕನ್ನಡ ಭಾಷೆಯಲ್ಲಿರುವ ಯಾವುದೇ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಗೊಂದಲವಾದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿ ಪ್ರಶ್ನೆಗಳನ್ನು ಸಹ ನೋಡಿಕೊಂಡು ಪ್ರಶ್ನೆಯನ್ನು ಅರ್ಥೈಸಿಕೊಳ್ಳುವುದು.
8. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಓ.ಎಂ.ಆರ್. ಉತ್ತರ ಹಾಳೆಯ ಮೇಲೆ ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.
9. **ಅಭ್ಯರ್ಥಿಯು ತಮ್ಮ personalized ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿಯು, ನಾಮಿನಲ್ ರೋಲ್‌ನ ತಮ್ಮ ಅಂಕಣದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿಯು ಒಂದೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ವ್ಯತ್ಯಾಸ ಕಂಡು ಬಂದಲ್ಲಿ ಅಭ್ಯರ್ಥಿಯು ಯಾವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನು ಉಪಯೋಗಿಸಿರುತ್ತಾರೆ ಎಂಬುದರ ಬಗ್ಗೆ ಘೋಷಣಾ ಪತ್ರವನ್ನು ನೀಡತಕ್ಕದ್ದು. ಇಲ್ಲದಿದ್ದಲ್ಲಿ ಅಭ್ಯರ್ಥಿಯ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯನ್ನೇ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.**
10. ಒಂದು ವೇಳೆ ಅಭ್ಯರ್ಥಿಯು ಬೇರೊಬ್ಬ ಅಭ್ಯರ್ಥಿಯ personalized ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಂತಹ ಓ.ಎಂ.ಆರ್. ಉತ್ತರ ಹಾಳೆಯನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
11. ಅಭ್ಯರ್ಥಿಯು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡತಕ್ಕದ್ದು. ತಪ್ಪಿದಲ್ಲಿ, ಅಂತಹ ಅಭ್ಯರ್ಥಿಯ ಓ.ಎಂ.ಆರ್. ಉತ್ತರ ಹಾಳೆಯನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
12. ಅಭ್ಯರ್ಥಿಯು Non-personalized ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಭ್ಯರ್ಥಿಯು ನೋಂದಣಿ ಸಂಖ್ಯೆಯನ್ನು ಒದಗಿಸಿರುವ ಸ್ಥಳದಲ್ಲಿ ಬರೆದು ಸಂಬಂಧಪಟ್ಟ ವೃತ್ತವನ್ನು ತುಂಬಬೇಕು ಹಾಗೂ ತಮ್ಮ ಪ್ರಶ್ನೆಪತ್ರಿಕೆ ಶ್ರೇಣಿಯನ್ನು ಕಡ್ಡಾಯವಾಗಿ ಬರೆಯಬೇಕು ಮತ್ತು ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡಬೇಕು. ಇಲ್ಲದಿದ್ದಲ್ಲಿ, ಅಂತಹ ಅಭ್ಯರ್ಥಿಯ ಓ.ಎಂ.ಆರ್. ಉತ್ತರ ಹಾಳೆಯನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
13. ನಾಮಿನಲ್ ರೋಲ್ (**ಹಾಜರಾತಿ ಹಾಳೆ**)ನಲ್ಲಿ ಅಭ್ಯರ್ಥಿಯು ತಪ್ಪದೇ ಸಹಿ ಹಾಕತಕ್ಕದ್ದು.
14. ಅಭ್ಯರ್ಥಿಯು **ಮೇಲ್ಕಂಡ** ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಅಂತಹ ಓ.ಎಂ.ಆರ್. ಉತ್ತರ ಹಾಳೆಯನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
15. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಓ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
16. ಪರೀಕ್ಷೆ ಮುಗಿದ ನಂತರ ಸಂವೀಕ್ಷಕರಿಂದ ಹಿಂಪಡೆದ ಕಾರ್ಬನ್ ರಹಿತ ಓ.ಎಂ.ಆರ್. ಉತ್ತರ ಹಾಳೆಯ (Candidate copy) ಪ್ರತಿಯನ್ನು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವವರೆಗೆ ಜೋಪಾನವಾಗಿ ಸಂರಕ್ಷಿಸಿಟ್ಟುಕೊಳ್ಳಬೇಕು ಮತ್ತು ಆಯೋಗವು ಯಾವುದೇ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸಿದ್ದಲ್ಲಿ, ತಪ್ಪದೇ ಅದೇ ಪ್ರತಿಯನ್ನು ಹಾಜರುಪಡಿಸಬೇಕು.
17. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆಪತ್ರಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪತ್ರಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.

**ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಸ್ಮಾರ್ಟ್ ವಾಚ್‌ಗಳು, ಕ್ಯಾಲ್ಕ್ಯುಲೇಟರ್‌ಗಳನ್ನು ಅಥವಾ ಇತರೆ ಎಲೆಕ್ಟ್ರಾನಿಕ್/ಕಮ್ಯುನಿಕೇಶನ್ ಉಪಕರಣಗಳನ್ನು ಪರೀಕ್ಷಾ ಆವರಣಗಳಲ್ಲಿ ತರುವುದನ್ನು ನಿಷೇಧಿಸಲಾಗಿದೆ.**

***Note** : English version of the instructions is printed on the back cover of this booklet.*

SEAL

Teachingninja.in

1. ಭಾರತದಲ್ಲಿ ಮೊದಲ ಬಾರಿಗೆ ಅಂಚೆ ಚೀಟಿಯನ್ನು ಜಾರಿಗೊಳಿಸಿದವರು ಯಾರು?

(1) ಲಾರ್ಡ್ ರಿಪ್ಪನ್

(2) ಲಾರ್ಡ್ ವಿಲಿಯಮ್ ಬೆಂಟಿಕ್

(3) ಲಾರ್ಡ್ ಇರ್ವಿನ್

(4) ಲಾರ್ಡ್ ಡಾಲ್‌ಹೌಸಿ

2. "ಡಿಪ್ರೆಸ್ಡ್ ಕ್ಲಾಸ್ ಲೀಗ್" ಸ್ಥಾಪಕ

(1) ಡಾ. ಬಿ.ಆರ್. ಅಂಬೇಡ್ಕರ್

(2) ಡಾ. ಬಾಬು ಜಗಜೀವನ ರಾಮ್

(3) ಪೆರಿಯಾರ್ ರಾಮಸ್ವಾಮಿ ನಾಯ್ಕರ್

(4) ಜ್ಯೋತಿ ಬಾಪುಲೇ

3. 1963ರಲ್ಲಿ ಭಾರತ ರತ್ನ ಪ್ರಶಸ್ತಿ ಪಡೆದವರು

(1) ಪಿ.ವಿ. ಕಾಣೆ.

(2) ಸಿ. ರಾಜಗೋಪಾಲಚಾರಿ

(3) ಅಣ್ಣಮಾಚಾರಿ

(4) ಸಿ.ವಿ. ರಾಮನ್

4. ಕರ್ನಾಟಕದಲ್ಲಿ ಎಲ್ಲಿ ಕಾಳಿಂಗಸರ್ಪ ಸಂಶೋಧನಾ ಕೇಂದ್ರವಿದೆ?

(1) ಆಗುಂಬೆ

(2) ಸುಬ್ರಹ್ಮಣ್ಯ

(3) ಕುಶಾಲನಗರ

(4) ದಾಂಡೇಲಿ

5. ಕೆಳಗಿನವುಗಳಲ್ಲಿ ಯಾವುದು ತಪ್ಪಾಗಿ ಹೊಂದಿಕೆಯಾಗಿದೆ?

(1) H5N1 – ಹಕ್ಕಿಗಳು

(2) H1N1 – ಹಂದಿಗಳು

(3) NiV – ಬಾವುಲಿಗಳು

(4) KFDV – ದನಕರುಗಳು

6. ಕರ್ನಾಟಕ ರಾಜ್ಯದ ಪತಂಗ ಎಂಬುದಾಗಿ ಅಂಗೀಕೃತವಾಗಿರುವಂಥ ಪತಂಗದ ಪ್ರಭೇದದ ಹೆಸರೇನು?

(1) ನಾರ್ಥರ್ನ್ ಬರ್ಡ್ ವಿಂಗ್

(2) ಬ್ಲೂ ಮೊರಾನ್

(3) ಟೇಲ್ಡ್ ಜೇ

(4) ಸದರ್ನ್ ಬರ್ಡ್ ವಿಂಗ್

7. ರಕ್ತದಲ್ಲಿ ಮುಖ್ಯವಾಗಿ ಆಮ್ಲಜನಕವು ಈ ಮೂಲಕ ಸಾಗಣೆ ಆಗುತ್ತದೆ.

(1) ರಕ್ತ ಪ್ಲಾಸ್ಮಾ

(2) ಕೆಂಪು ರಕ್ತ ಕಣಗಳು

(3) ಬಿಳಿ ರಕ್ತ ಕಣಗಳು

(4) ಥ್ರಂಬೋಸೈಟ್ಸ್‌ಗಳು



Teachingninja.in

8. 'ಮಾಸ್ಟರ್ ಗ್ಲ್ಯಾಂಡ್' ಎಂದು ಯಾವುದನ್ನು ಕರೆಯುತ್ತಾರೆ?

(1) ಥೈರಾಯ್ಡ್

(2) ಪಿಟ್ಯುಟರಿ

(3) ಮೇದೋಜೀರಕ ಗ್ರಂಥಿ

(4) ಮೇಲಿನವುಗಳಲ್ಲಿ ಯಾವುದೂ ಅಲ್ಲ

9. ಈ ಕೆಳಕಂಡ ವಿಜ್ಞಾನಿಗಳಲ್ಲಿ ಭಾರತದ ಪಕ್ಷಿತಜ್ಞನನ್ನು ಗುರುತಿಸಿ.

(1) ಅಬ್ದುಲ್ ಕಲಾಂ

(2) ಸ್ವಾಮಿನಾಥನ್

(3) ಸಲೀಂ ಆಲಿ

(4) ಸಿ.ಎನ್.ಆರ್. ರಾವ್

10. ಈ ಕೆಳಗಿನವುಗಳಲ್ಲಿ ಯಾವುದರಲ್ಲಿ ವಿಟಮಿನ್ 'ಎ' ಅತ್ಯಧಿಕ ಪ್ರಮಾಣದಲ್ಲಿದೆ?

(1) ಸೇಬು

(2) ಬಾಳೆಹಣ್ಣು

(3) ಜೇನುತುಪ್ಪ

(4) ಲಿಂಬೆಹಣ್ಣು

11. ಭಾರತವು ಈ ಕೆಳಗಿನವುಗಳ ಪೇಟೆಂಟ್ ಹೊಂದಿದೆ.

(1) ಬೇವು

(2) ಅರಿಶಿನ

(3) (1) ಮತ್ತು (2) ಸಹ

(4) ಮೇಲಿನವುಗಳಲ್ಲಿ ಯಾವುದೂ ಅಲ್ಲ

12. ಎರಡನೆಯ ಮಹಾಯುದ್ಧದ ಸಮಯದಲ್ಲಿ ಗಾಯಗೊಂಡ ಲಕ್ಷಾಂತರ ಸೈನಿಕರ ಜೀವವನ್ನು ಉಳಿಸಿದ ಅದ್ಭುತ ಔಷಧ ಎಂದು ಕರೆಯಲ್ಪಡುವ ಪ್ರತಿಜೀವಕ ಪೆನಿಸಿಲಿನ್ ಈ ಕೆಳಗಿನ ಸೂಕ್ಷ್ಮ ಜೀವಾಣುವಿನಿಂದ ತಯಾರಿಸಲ್ಪಡುತ್ತದೆ.

(1) ಬ್ಯಾಕ್ಟೀರಿಯಂ

(2) ವೈರಾಣು

(3) ಆಕ್ಟಿನೋಮೈಸಿಟ್

(4) ಶಿಲೀಂಧ್ರ

13. ಮಣ್ಣಿನಲ್ಲಿ ಕಂಡುಬರುವ ಆಮ್ಲ

(1) ಅಸೆಟಿಕ್ ಆಮ್ಲ

(2) ಫಾರ್ಮಿಕ್ ಆಮ್ಲ

(3) ಕಾರ್ಬೋನಿಕ್ ಆಮ್ಲ

(4) ಹ್ಯೂಮಿಕ್ ಆಮ್ಲ



Teachingninja.in

14. ಅಲಂ ಮಣ್ಣಿನ ನೀರನ್ನು ______ ನಿಂದ ಶುದ್ಧೀಕರಿಸುತ್ತದೆ.

(1) ಹೆಪ್ಪುಗಟ್ಟುವಿಕೆ

(2) ಡಯಾಲಿಸಸ್

(3) ಹೀರಿಕೊಳ್ಳುವಿಕೆ

(4) ನಿಜವಾದ ದ್ರಾವಣವನ್ನು ರೂಪಿಸುವುದು

15. ನ್ಯೂಕ್ಲಿಯ ಕ್ರಿಯಾಕಾರಿಯಲ್ಲಿ ______ ಅನ್ನು ಮಂದಕಾರಿಯಾಗಿ ಬಳಸುತ್ತಾರೆ.

(1) ಡ್ರೈ ಐಸ್

(2) ಭಾರ ಜಲ

(3) ಇದ್ದಿಲು

(4) ಜಲಜನಕ

16. ವಾಹನಗಳಲ್ಲಿ ಹೊರಸೂಸುವಿಕೆ ಪರೀಕ್ಷೆಯನ್ನು ______ ಅನಿಲದ ಪ್ರಮಾಣವನ್ನು ಅಳೆಯಲು ಮಾಡಲಾಗುತ್ತದೆ.

(1) $CO_2$

(2) $S_2$

(3) NO

(4) CO

17. ಜಲಮಾಲಿನ್ಯದಿಂದ ಬರುವ 'ಮಿನಮಟ' ರೋಗವು ಈ ಕೆಳಕಂಡ ಸಂಯುಕ್ತಗಳಿಂದ ಉಂಟಾಗುತ್ತದೆ.

(1) ಸೀಸ

(2) ಕ್ಯಾಡ್ಮಿಯಂ

(3) ಪಾದರಸ

(4) ಕಬ್ಬಿಣ

18. ಕ್ಯಾನ್ಸರ್ ಚಿಕಿತ್ಸೆಗಾಗಿ ಈ ಕೆಳಗಿನ ಯಾವ ವಿಕಿರಣಗಳನ್ನು ಬಳಸಲಾಗುತ್ತದೆ?

(1) ಆಲ್ಫಾ

(2) ಗಾಮಾ

(3) ಬೀಟಾ

(4) ಇವುಗಳಲ್ಲಿ ಎಲ್ಲವೂ

19. ಕ್ಲೋರೋಫಿಲ್ ______ ಅನ್ನು ಹೊಂದಿರುತ್ತದೆ.

(1) ಕಬ್ಬಿಣದ ಸಂಕೀರ್ಣ

(2) ಮೆಗ್ನೀಷಿಯಮ್ ಸಂಕೀರ್ಣ

(3) ಕ್ಯಾಲ್ಸಿಯಂ ಸಂಕೀರ್ಣ

(4) ಪೊಟ್ಯಾಶಿಯಮ್ ಸಂಕೀರ್ಣ



Teachingninja.in

20. ಈ ಕೆಳಗಿನವುಗಳಲ್ಲಿ ಯಾವುದು ರಾಸಾಯನಿಕ ಬದಲಾವಣೆಯಲ್ಲ?

(1) ಕಾಗದವನ್ನು ಸುಡುವುದು

(2) ಹಾಲನ್ನು ಮೊಸರಿಗೆ ಪರಿವರ್ತಿಸುವುದು

(3) ನೀರಿಗೆ ಸಕ್ಕರೆ ಸೇರಿಸುವುದು

(4) ಇವುಗಳಲ್ಲಿ ಯಾವುದೂ ಇಲ್ಲ

21. ವೇಗವರ್ಧನೆಯಿಂದ ಲಿಫ್ಟ್ ಕೆಳಗೆ ಚಲಿಸುವಾಗ, ದೇಹದ ಸ್ಪಷ್ಟ ತೂಕ

(1) ನಿಜವಾದ ತೂಕಕ್ಕಿಂತ ಕಡಿಮೆ

(2) ನಿಜವಾದ ತೂಕಕ್ಕಿಂತ ಹೆಚ್ಚು

(3) ಲಘುವಾದ

(4) ಬದಲಾಗುವುದಿಲ್ಲ

22. ದ್ಯುತಿ ತಂತು ಯಾವ ತತ್ವದ ಮೇಲೆ ಕಾರ್ಯನಿರ್ವಹಿಸುತ್ತದೆ?

(1) ಬೆಳಕಿನ ಚದುರುವಿಕೆ

(2) ಒಟ್ಟು ಆಂತರಿಕ ಹೀರಿಕೊಳ್ಳುವಿಕೆ

(3) ಒಟ್ಟು ಆಂತರಿಕ ಪ್ರತಿಫಲನ

(4) ದ್ಯುತಿ ಭ್ರಮಣ

23. ಬಟ್ಟೆ ಒಗೆಯುವ ಯಂತ್ರವು ಯಾವ ತತ್ವದ ಮೇಲೆ ಕಾರ್ಯನಿರ್ವಹಿಸುತ್ತದೆ?

(1) ರಿವರ್ಸ್ ಆಸ್ಮೋಸಿಸ್

(2) ಪ್ರಸರಣ

(3) ಬೇರ್ಪಡಿಸು

(4) ವಿಗಲನ

24. ಶಾರ್ಟ್ ಸರ್ಕ್ಯೂಟ್ ಸಮಯದಲ್ಲಿ, ಸರ್ಕ್ಯೂಟ್‌ನ ಕರ್ರಂಟ್

(1) ಗಣನೀಯವಾಗಿ ಕಡಿಮೆ ಆಗುವುದು

(2) ಬದಲಾಗುವುದಿಲ್ಲ

(3) ಹೆಚ್ಚು ಹೆಚ್ಚಾಗುತ್ತದೆ

(4) ನಿರಂತರವಾಗಿ ಬದಲಾಗುತ್ತದೆ

25. ನಾವು ಗಾಳಿಯನ್ನು ಉಸಿರಾಡುವಾಗ, ಆಮ್ಲಜನಕದ ಜೊತೆಗೆ ಸಾರಜನಕವನ್ನು ತೆಗೆದುಕೊಳ್ಳುತ್ತೇವೆ. ಸಾರಜನಕದ ವಿಧಿ ಏನು?

(1) ಅದು ಆಮ್ಲಜನಕದ ಜೊತೆಗೆ ಕೋಶದಲ್ಲಿ ಚಲಿಸುತ್ತದೆ

(2) ಅದು ಇಂಗಾಲದ ಡೈ ಆಕ್ಸೈಡ್ ಜೊತೆಗೆ ನಿಶ್ವಾಸದ ಸಮಯದಲ್ಲಿ ಹೊರ ಬರುತ್ತದೆ

(3) ಅದು ಮೂಗಿನ ಕೋಶಗಳಿಂದ ಮಾತ್ರ ಹೀರಿಕೊಳ್ಳುತ್ತದೆ

(4) ಸಾರಜನಕದ ಪ್ರಮಾಣ ಮೊದಲೇ ಕೋಶದಲ್ಲಿ ತುಂಬ ಇರುವುದರಿಂದ ಅದು ಹೀರಿಕೊಳ್ಳುವುದಿಲ್ಲ



Teachingninja.in

**26.** ಕೆಳಗಿನ ಯಾವ ರಾಜ್ಯವು ತನ್ನ ಶಾಸನ ಸಭೆಗೆ ಹೊಸ ಲಾಂಛನವನ್ನು (Logo) ಅಳವಡಿಸಿಕೊಂಡಿದೆ ಮತ್ತು ಅದು ಫಾಕ್ಸ್‌ಟೇಲ್ ಆರ್ಕಿಡ್ (Foxtail Orchid)ನ್ನು ಒಳಗೊಂಡಿದೆ?

(1) ಅರುಣಾಚಲ ಪ್ರದೇಶ

(2) ಮಿಜೋರಾಮ್

(3) ಅಸ್ಸಾಂ

(4) ಹಿಮಾಚಲ ಪ್ರದೇಶ

**27.** ಭಾರತದ ಯಾವ ರಾಜ್ಯ ಮೂರು ರಾಜಧಾನಿಗಳನ್ನು ಸ್ಥಾಪಿಸಲು ನಿರ್ಧರಿಸಿದೆ?

(1) ತೆಲಂಗಾಣ

(2) ಆಂಧ್ರ ಪ್ರದೇಶ

(3) ರಾಜಸ್ಥಾನ

(4) ಕರ್ನಾಟಕ

**28.** ಕೆಳಗಿನ ಯಾವ ರಾಜ್ಯಗಳ ಮಧ್ಯೆ ಪ್ರಥಮ ಕಿಸಾನ್ ರೈಲ್ವೇಯನ್ನು ಪ್ರಾರಂಭಿಸಲಾಯಿತು?

(1) ಕರ್ನಾಟಕ ಮತ್ತು ಮಹಾರಾಷ್ಟ್ರ

(2) ಮಹಾರಾಷ್ಟ್ರ ಮತ್ತು ಬಿಹಾರ್

(3) ಮಹಾರಾಷ್ಟ್ರ ಮತ್ತು ತಮಿಳುನಾಡು

(4) ಕೇರಳ ಮತ್ತು ತಮಿಳುನಾಡು

**29.** ಕರ್ನಾಟಕದ ವಿಜಯನಗರ ಹೊಸ ಜಿಲ್ಲೆಯಲ್ಲಿ ಎಷ್ಟು ತಾಲೂಕುಗಳನ್ನು ಸೇರಿಸಲಾಗಿದೆ?

(1) 05

(2) 06

(3) 04

(4) 08

**30.** 2021ರ ಕರ್ನಾಟಕದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ EVMನ್ನು ಬಳಸಲು ಈ ಕೆಳಗಿನ ಯಾವ ಜಿಲ್ಲೆಯನ್ನು ಪ್ರಾಯೋಗಿಕ ಯೋಜನೆಯಾಗಿ ಆಯ್ಕೆ ಮಾಡಲಾಗಿತ್ತು?

(1) ಕೊಪ್ಪಳ

(2) ಬೀದರ್

(3) ಬಿಜಾಪುರ

(4) ಗುಲ್ಬರ್ಗಾ

**31.** ಏಷ್ಯನ್ ಅಮೇರಿಕಾ ಮೂಲದ ಯಾವ ಮಹಿಳೆ ಅಮೇರಿಕಾದ ಪ್ರಥಮ ಮಹಿಳಾ ಉಪಾಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ?

(1) ಜಾರ್ಜ್ ಕ್ಲಿಂಟನ್

(2) ಜೇರಿ ಬ್ರೌನ್

(3) ಕಮಲಾ ಹ್ಯಾರಿಸ್

(4) ಮೇಲಿನ ಯಾವುದೂ ಅಲ್ಲ



Teachingninja.in

32. ಈ ಕೆಳಗಿನ ಯಾವ ಕಾಯಿದೆಯ ಪ್ರಕಾರ ಸಮಾಜವಾದ ಎಂಬ ಪದವನ್ನು ಭಾರತದ ಸಂವಿಧಾನ ಪ್ರಸ್ತಾವನೆಯಲ್ಲಿ ಸೇರಿಸಲಾಯಿತು?

(1) 41ನೇಯ ತಿದ್ದುಪಡಿ ಕಾಯ್ದೆ

(2) 42ನೇಯ ತಿದ್ದುಪಡಿ ಕಾಯ್ದೆ

(3) 43ನೇಯ ತಿದ್ದುಪಡಿ ಕಾಯ್ದೆ

(4) 44ನೇಯ ತಿದ್ದುಪಡಿ ಕಾಯ್ದೆ

33. ಈ ಕೆಳಗಿನ ಯಾವ ಯುಗವನ್ನು "ಜೈನ ಸಾಹಿತ್ಯದ ಸುವರ್ಣಯುಗ" ಎಂದು ಕರೆಯಲಾಗಿದೆ?

(1) ರಾಷ್ಟ್ರಕೂಟರ ಯುಗ

(2) ಹೊಯ್ಸಳರ ಯುಗ

(3) ಚಾಲುಕ್ಯರ ಯುಗ

(4) ಶಾತವಾಹನರ ಯುಗ

34. ಬಿಜಾಪುರದ 'ಗೋಲ್ ಗುಂಬಜ್' ಅನ್ನು ಕಟ್ಟಿಸಿದ ವರ್ಷ ಯಾವುದು?

(1) 1620-58

(2) 1627-57

(3) 1561-1568

(4) ಮೇಲಿನ ಯಾವುದೂ ಅಲ್ಲ

35. ಕೊನೆಯ ಚಾಲುಕ್ಯ ಆಡಳಿತಗಾರ ಯಾರು?

(1) ಎರಡನೇ ಕೀರ್ತಿವರ್ಮ

(2) ದಂತಿದುರ್ಗ

(3) ಎರಡನೇ ಇಂದ್ರ

(4) ಒಂದನೇ ಕರ್ಕ

36. 'ತಾಳಗುಂದ ಶಾಸನ'ದ ಕರ್ತೃ ಯಾರು?

(1) ರವಿಕೀರ್ತಿ

(2) ಕುಬ್ಜಕವಿ

(3) ಹರಿಸೇನ

(4) ಮೇಲಿನ ಯಾವುದೂ ಅಲ್ಲ

37. ಯಾರು ಬಸವೇಶ್ವರರನ್ನು 'ಕರ್ನಾಟಕದ ಮಾರ್ಟಿನ್ ಲೂಥರ್' ಎಂದು ಹೊಗಳಿದ್ದಾರೆ?

(1) ಸರ್ ಅರ್ಥರ್ ಮೈಲರ್

(2) ಬಿಜ್ಜಳ

(3) ಜಾನ್ ಫ್ಲೀಟರ್

(4) ಜಾತವೇದ ಮುನಿ

38. "ಹಿಂದ್ ಸ್ವರಾಜ್ಯ" ಪುಸ್ತಕದ ಕರ್ತೃ ಯಾರು?

(1) ಜವಾಹರಲಾಲ್ ನೆಹರು

(2) ಮೋತಿಲಾಲ್ ನೆಹರು

(3) ಎಂ.ಕೆ. ಗಾಂಧಿ

(4) ಬಾಲಗಂಗಾಧರ ತಿಲಕ್



Teachingninja.in

39. ಡಾ. ಬಿ.ಆರ್. ಅಂಬೇಡ್ಕರ್‌ವರ ನೇತೃತ್ವದಲ್ಲಿ "ಮಹಾಡ್ ಸತ್ಯಾಗ್ರಹ" ನಡೆದ ವರ್ಷ

(1) 1927
(2) 1929
(3) 1930
(4) 1932

40. "ಪ್ರಭುದ್ಧ ಭಾರತ" ಎಂಬ ಆಂಗ್ಲ ಪತ್ರಿಕೆಯನ್ನು ಈ ಕೆಳಗಿನವರಲ್ಲಿ ಯಾರು ಪ್ರಕಟಿಸಿದರು?

(1) ಸ್ವಾಮಿ ದಯಾನಂದ ಸರಸ್ವತಿ
(2) ರಾಜಾರಾಮ ಮೋಹನ್‌ರಾಯ್
(3) ಆ್ಯನಿಬೆಸೆಂಟ್
(4) ಸ್ವಾಮಿ ವಿವೇಕಾನಂದ

41. ಭಾರತದಲ್ಲಿ ಪ್ರಥಮ ಬಾರಿಗೆ "ಇಂಡಿಯನ್ ಸಿವಿಲ್ ಸರ್ವೀಸ್" (ಭಾರತ ನಾಗರೀಕ ಸೇವೆ) ಜಾರಿಗೆ ತಂದ ಗವರ್ನರ್ ಜನರಲ್ ಯಾರು?

(1) ವಾರನ್ ಹೆಸ್ಟಿಂಗ್ಸ್
(2) ಲಾರ್ಡ್ ಕಾರ್ನ್‌ವಾಲೀಸ್
(3) ಲಾರ್ಡ್ ವಿಲಿಯಂ ಬೆಂಟಿಂಕ್
(4) ಲಾರ್ಡ್ ವೆಲ್ಲೆಸ್ಲಿ

42. ಬಕ್ಸಾರ್ ಕದನವು ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು?

(1) ಮದ್ರಾಸ್ ಒಪ್ಪಂದ
(2) ಅಲಿ ನಗರ ಒಪ್ಪಂದ
(3) ಪಾಂಡಿಚೇರಿ ಒಪ್ಪಂದ
(4) ಅಲಹಾಬಾದ್ ಒಪ್ಪಂದ

43. ಶಿವಾಜಿಯ ಆಧ್ಯಾತ್ಮಿಕ ಗುರು ಯಾರು?

(1) ತುಳಸಿದಾಸ
(2) ದಾದಾಜಿ ಕೊಂಡದೇವ
(3) ರಾಮದಾಸ
(4) ತುಕಾರಾಮ



Teachingninja.in

44. ಕೆಳಗಿನ ಪಟ್ಟಿ-I ಮತ್ತು ಪಟ್ಟಿ-IIನ್ನು ಹೊಂದಿಸಿ. ಸರಿ ಹೊಂದಾಣಿಕೆಯನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿ.

| ಪಟ್ಟಿ–I | ಪಟ್ಟಿ–II |
|---|---|
| ಬೌದ್ಧ ಮಹಾಸಭೆಗಳು | ಅರಸರು |
| (A) Iನೇ ಬೌದ್ಧ ಮಹಾಸಭೆ | (i) ಕಾಲಾಶೋಕ |
| (B) IIನೇ ಬೌದ್ಧ ಮಹಾಸಭೆ | (ii) ಅಶೋಕ |
| (C) IIIನೇ ಬೌದ್ಧ ಮಹಾಸಭೆ | (iii) ಕನಿಷ್ಕ |
| (D) IVನೇ ಬೌದ್ಧ ಮಹಾಸಭೆ | (iv) ಅಜಾತ ಶತ್ರು |

ಸಂಕೇತಗಳು :

| | (A) | (B) | (C) | (D) |
|---|---|---|---|---|
| (1) | (ii) | (i) | (iv) | (iii) |
| (2) | (iv) | (iii) | (ii) | (i) |
| (3) | (i) | (ii) | (iii) | (iv) |
| (4) | (iv) | (i) | (ii) | (iii) |

45. ಈ ಕೆಳಕಂಡ ಪ್ರಮುಖ ಸಂಘಟನೆಗಳು/ಸಂಸ್ಥೆಗಳನ್ನು ಭಾರತೀಯ ಹಿಂದು ನಾಯಕರು/ಸಮಾಜ ಸುಧಾರಕರು ಸ್ವಾತಂತ್ರ್ಯ ಚಳುವಳಿ ಸಮಯದಲ್ಲಿ ಸ್ಥಾಪಿಸಿದರು.

(A) ಗೋಪಾಲ ಗಣೇಶ ಅಗರ್‌ಕರ್ – ದೇವ ಸಮಾಜ

(B) ಶಿವನಾರಾಯಣ ಅಗ್ನಿಹೋತ್ರಿ – ಡೆಕ್ಕನ್ ಎಜ್ಯುಕೇಶನ್ ಸೊಸೈಟಿ

(C) ಗೋಪಾಲ ಕೃಷ್ಣ ಗೋಖಲೆ – ದಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ

(D) ಎನ್.ಎಂ. ಜೋಶಿ – ದಿ ಸೋಷಿಯಲ್ ಸರ್ವಿಸ್ ಲೀಗ್

(1) (A) ಮತ್ತು (B)

(2) (B), (C) ಮತ್ತು (D)

(3) (C) ಮತ್ತು (D)

(4) (C) ಮಾತ್ರ



Teachingninja.in

46. ಈ ಕೆಳಕಂಡ ಪಟ್ಟಿ–I ರ ಜೊತೆಗೆ ಪಟ್ಟಿ–II ರನ್ನು ಹೊಂದಿಸಿ, ಕೆಳಗೆ ನೀಡಿರುವ ಸರಿಯಾದ ಆಯ್ಕೆಯನ್ನು ಪರಿಗಣಿಸಿ.

| **ಪಟ್ಟಿ–I** | **ಪಟ್ಟಿ–II** |
|---|---|
| **ಕರ್ನಾಟಕ ಪ್ರದೇಶ ಕಾಂಗ್ರೇಸ್ ಅಧಿವೇಶನಗಳು** | **ಅಧ್ಯಕ್ಷರು** |
| (A) 1920ರ ಧಾರವಾಡದ ಅಧಿವೇಶನ | (i) ಸಿ.ರಾಜಗೋಪಾಲಚಾರಿ |
| (B) 1922ರ ಮಂಗಳೂರು ಅಧಿವೇಶನ | (ii) ಶ್ರೀನಿವಾಸ್ ಅಯ್ಯಂಗಾರ್ |
| (C) 1923ರ ಬಿಜಾಪುರ ಅಧಿವೇಶನ | (iii) ಸರೋಜಿನಿ ನಾಯ್ಡು |
| (D) 1926ರ ಬಳ್ಳಾರಿ ಅಧಿವೇಶನ | (iv) ಗಂಗಾಧರರಾವ್ ದೇಶಪಾಂಡೆ |

| | (A) | (B) | (C) | (D) |
|---|---|---|---|---|
| (1) | (i) | (ii) | (iii) | (iv) |
| (2) | (iv) | (iii) | (i) | (ii) |
| (3) | (iv) | (iii) | (ii) | (i) |
| (4) | (iii) | (iv) | (ii) | (i) |

47. ಈ ಕೆಳಗಿನ ಯಾವ ಭಾಷೆಯು ಕದಂಬರ ಕಾಲದ "ಕೋರ್ಟ್ ಲ್ಯಾಂಗ್ವೇಜ್" ಆಗಿತ್ತು?

(1) ಕನ್ನಡ ಮತ್ತು ಸಂಸ್ಕೃತ

(2) ಕರೋಷ್ಠಿ ಮತ್ತು ಸಂಸ್ಕೃತ

(3) ಪ್ರಾಕೃತ ಮತ್ತು ಸಂಸ್ಕೃತ

(4) ಅರ್ಮನಿಕ್ ಮತ್ತು ಗ್ರೀಕ್

48. ಮೌರ್ಯರ ಕಾಲದಲ್ಲಿ ಈ ಕೆಳಗಿನ ಯಾರು ಸುದರ್ಶನ ಸರೋವರವನ್ನು ಕಟ್ಟಿದರು?

(1) ಚಂದ್ರಗುಪ್ತ ಮೌರ್ಯ

(2) ತುಶಾಸ್ಪ

(3) ಅಶೋಕ

(4) ಪುಷ್ಯಗುಪ್ತ

49. "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎನ್ನುವ ಸೂಕ್ತಿಗೆ ಬ್ರಿಟಿಷ್ ಕಾಲದ ಕೆಳಗಿನ ಯಾವ ಪದ್ಧತಿಯು ಕಾರಣವಾಗಿತ್ತು?

(1) ಜಮೀನ್ದಾರಿ ಪದ್ಧತಿ

(2) ಮಹಲ್ವಾರಿ ಪದ್ಧತಿ

(3) ರೈತವಾರಿ ಪದ್ಧತಿ

(4) ಇವುಗಳಲ್ಲಿ ಯಾವುದೂ ಅಲ್ಲ



Teachingninja.in

50. ಭಾರತೀಯ ಮ್ಯಾಂಗ್ರೋವ್ ಅರಣ್ಯಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ಸರಿಯಾಗಿಲ್ಲ?

(1) ಇದು ತೀರ ಪ್ರದೇಶಗಳಲ್ಲಿ ಕಂಡುಬರುವ ಉಬ್ಬರವಿಳಿತ ಕಾಡುಗಳು

(2) ಈ ಕಾಡುಗಳು ರಾಯಲ್ ಬೆಂಗಾಲ್ ಹುಲಿಗಳಿಗೆ ಪ್ರಸಿದ್ಧವಾಗಿದೆ

(3) ಇವುಗಳನ್ನು ಉಷ್ಣಮೋಷಿತ ಸಸ್ಯವರ್ಗ ಎಂದು ಕರೆಯುತ್ತಾರೆ

(4) ಸುಂದರಿ ಮರಗಳಿಂದಾಗಿ ಇದನ್ನು ಸುಂದರಬನ ಎನ್ನುತ್ತಾರೆ

51. ಈ ಕೆಳಗಿನವುಗಳಲ್ಲಿ ಒಂದು ನದಿ ಸಮಭಾಜಕ ವೃತ್ತವನ್ನು 2 ಸಲ ಹಾಯ್ದು ಹೋಗುವುದು.

(1) ಕಾಂಗೋ ನದಿ

(2) ಅಮೇಜಾನ್ ನದಿ

(3) ನೈಜಿರ್ ನದಿ

(4) ನೈಲ್ ನದಿ

52. ಕರ್ನಾಟಕದ ಪೂರ್ವ ಪಶ್ಚಿಮದ ಅಗಲವೆಷ್ಟು?

(1) 400 ಕಿ.ಮೀ.

(2) 350 ಕಿ.ಮೀ.

(3) 300 ಕಿ.ಮೀ.

(4) 375 ಕಿ.ಮೀ.

53. ಕೆಳಗಿನ ಪಟ್ಟಿ–I (ಬೆಳೆಗಳು) ಮತ್ತು ಪಟ್ಟಿ–II (ರಾಜ್ಯದ ಹೆಸರು) ಹೊಂದಿಸಿ, ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಆಯ್ಕೆ ಮಾಡಿ.

| ಪಟ್ಟಿ–I (ಬೆಳೆಗಳು) | ಪಟ್ಟಿ–II (ರಾಜ್ಯಗಳು) |
|---|---|
| (A) ಕಬ್ಬು | (i) ಕರ್ನಾಟಕ |
| (B) ತೆಂಗು | (ii) ಮಹಾರಾಷ್ಟ್ರ |
| (C) ಕಾಫೀ | (iii) ಆಂಧ್ರ ಪ್ರದೇಶ |
| (D) ಶೇಂಗಾ (ನೆಲಗಡಲೆ) | (iv) ಕೇರಳ |

**ಸಂಕೇತಗಳು :**

| | (A) | (B) | (C) | (D) |
|---|---|---|---|---|
| (1) | (ii) | (iv) | (iii) | (i) |
| (2) | (iv) | (ii) | (iii) | (i) |
| (3) | (ii) | (iv) | (i) | (iii) |
| (4) | (iv) | (ii) | (i) | (iii) |

54. ಏಳು ಬೆಟ್ಟಗಳ ನಗರ ಯಾವುದು?

(1) ಲಂಡನ್

(2) ರೋಮ್

(3) ನ್ಯೂಯಾರ್ಕ್

(4) ಟೋಕಿಯೋ



Teachingninja.in

55. ಈ ಕೆಳಗಿನವುಗಳಲ್ಲಿ ಯಾವ ಒಂದು ಜೋಡಿಯು ಸರಿಯಾಗಿ ಹೊಂದಾಣಿಕೆಯಾಗಿರುವುದಿಲ್ಲ?

(1) ಜಾಗತಿಕ ಸಾಗರಿಕ ದಿನ – ಜೂನ್ 8

(2) ಜಾಗತಿಕ ಅರಣ್ಯ ದಿನ – ಮಾರ್ಚ್ 21

(3) ಭೂಮಿ ದಿನ – ಏಪ್ರಿಲ್ 22

(4) ಜಾಗತಿಕ ಜನಸಂಖ್ಯೆ ದಿನ – ಜುಲೈ 25

56. ಉಷ್ಣವಲಯ ಕಾಡುಗಳು ದಟ್ಟವಾಗಿವೆ : ಕಾರಣ

(1) ವನ್ಯ ಪ್ರಾಣಿಗಳು

(2) ಅತಿಯಾದ ಉಷ್ಣತೆ ಮತ್ತು ಕಡಿಮೆ ಮಳೆ

(3) ಕಡಿಮೆ ಉಷ್ಣಾಂಶ ಮತ್ತು ಕಡಿಮೆ ಮಳೆ

(4) ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ

57. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೋಲಿಕೆಯಾಗುವುದಿಲ್ಲ?

(1) ಕೊಡಚಾದ್ರಿ ಬೆಟ್ಟ – ಶಿವಮೊಗ್ಗ

(2) ಮುಳ್ಳಯ್ಯನಗಿರಿ ಬೆಟ್ಟ – ಚಿಕ್ಕಮಂಗಳೂರು

(3) ಶಿವಗಂಗೆ ಬೆಟ್ಟ – ತುಮಕೂರು

(4) ಪುಷ್ಪಗಿರಿ ಬೆಟ್ಟ – ಕೊಡಗು

58. ಜಗತ್ತಿನ ಅತೀ ದೊಡ್ಡ ದ್ವೀಪ ಸಮೂಹ ಯಾವುದು?

(1) ಅಂಡಮಾನ್ ಮತ್ತು ನಿಕೋಬಾರ್

(2) ಮಲೇಷಿಯಾ

(3) ಇಂಡೋನೇಷಿಯಾ

(4) ಮಾಲ್ಡೀವ್ಸ್

59. ಕರ್ನಾಟಕದ ಕರಾವಳಿಯ ಉದ್ದ

(1) 320 ಕಿ.ಮೀ.

(2) 325 ಕಿ.ಮೀ.

(3) 321 ಕಿ.ಮೀ.

(4) 330 ಕಿ.ಮೀ.

60. ವಾಯುಭಾರ ಮಾಪಕ ಏನನ್ನು ಅಳೆಯುತ್ತದೆ?

(1) ಗಾಳಿಯ ವೇಗ

(2) ಗಾಳಿಯ ದಿಕ್ಕು

(3) ಒತ್ತಡ

(4) ಆರ್ದ್ರತೆ



Teachingninja.in

61. ಈ ಕೆಳಗಿನ ಯಾವ ವೈಶಿಷ್ಟ್ಯವು ಭಾರತೀಯ ಸಂವಿಧಾನದ ಸಂಯುಕ್ತ ಪಾತ್ರವನ್ನು ಬೆಂಬಲಿಸುವುದಿಲ್ಲ?

(1) ಕೇಂದ್ರ ಮತ್ತು ರಾಜ್ಯಗಳ ನಡುವಣ ಅಧಿಕಾರಗಳ ವಿಂಗಡಣೆ

(2) ನ್ಯಾಯಾಲಯಗಳ ಅಧಿಕಾರಗಳು

(3) ಸಂವಿಧಾನವೇ ಸರ್ವಶ್ರೇಷ್ಠವೆಂಬ ಅಂಶ

(4) ಏಕ ಪೌರತ್ವ

62. ಈ ಕೆಳಗಿನ ಯಾವ ವಿಧಿಯು ಭಾರತದ ಪ್ರಧಾನಮಂತ್ರಿಯನ್ನು ನೇಮಿಸಲು ರಾಷ್ಟ್ರಪತಿಗೆ ಅಧಿಕಾರ ನೀಡುತ್ತದೆ?

(1) ವಿಧಿ 74

(2) ವಿಧಿ 75

(3) ವಿಧಿ 76

(4) ವಿಧಿ 77

63. ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಟ್ಟಮೊದಲಿಗೆ ಮಹಿಳಾ ನ್ಯಾಯಾಧೀಶರಾಗಿ ನೇಮಕಗೊಂಡವರು ಯಾರು?

(1) ರಾಣಿ ಜೇಠ್‌ಮಲಾನಿ

(2) ಅಣ್ಣ ಜಾರ್ಜ್ ಮಲ್ಹೋತ್ರಾ

(3) ಎಂ. ಫಾತಿಮಾ ಬಿವಿ

(4) ಲೀಲಾ ಸೇಠ್

64. ಹೈಕೋರ್ಟ್‌ನ ನ್ಯಾಯಾಧೀಶರ ನಿವೃತ್ತಿ ಅವಧಿಯು ________ ಆಗಿದೆ.

(1) 60 ವರ್ಷ

(2) 62 ವರ್ಷ

(3) 58 ವರ್ಷ

(4) 65 ವರ್ಷ

65. ಸಾರ್ವಭೌಮಾಧಿಕಾರವು ಪ್ರಜಾಪ್ರಭುತ್ವದಲ್ಲಿ ________ ನೆಲೆಸಿರುತ್ತದೆ.

(1) ರಾಷ್ಟ್ರಾಧ್ಯಕ್ಷರಲ್ಲಿ

(2) ಜನತೆಯಲ್ಲಿ

(3) ಪ್ರಧಾನಮಂತ್ರಿಯಲ್ಲಿ

(4) ನಾಗರೀಕ ಸೇವಾ ವರ್ಗದಲ್ಲಿ

66. ಕರ್ನಾಟಕ ಹೈಕೋರ್ಟ್ ಸ್ಥಾಪನೆಯಾಗಿದ್ದು ಯಾವಾಗ?

(1) 1885

(2) 1884

(3) 1886

(4) 1890

67. ಭಾರತದಲ್ಲಿ ರಾಜ್ಯದ ರಾಜ್ಯಪಾಲರಾಗಲು ಅರ್ಹ ವಯಸ್ಸೆಷ್ಟು?

(1) 30 ವರ್ಷ

(2) 25 ವರ್ಷ

(3) 35 ವರ್ಷ

(4) 40 ವರ್ಷ



Teachingninja.in

68. ಆಡಳಿತದ ಮೇಲೆ ನಾಗರಿಕರ ಪರಿಣಾಮಕಾರಿ ನಿಯಂತ್ರಣದ ವಿಧಾನವೆಂದರೆ

(1) ಚುನಾವಣೆ

(2) ಸಾರ್ವಜನಿಕ ಅಭಿಪ್ರಾಯ

(3) ಒತ್ತಡ ಗುಂಪುಗಳು

(4) ಸಲಹಾ ಸಮಿತಿಗಳು

69. ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಮವರ್ತಿ ಪಟ್ಟಿಗಳ ಬಗ್ಗೆ ಸಂವಿಧಾನದ ಯಾವ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಿದೆ?

(1) ಷೆಡ್ಯೂಲ್–I

(2) ಷೆಡ್ಯೂಲ್–III

(3) ಷೆಡ್ಯೂಲ್–V

(4) ಷೆಡ್ಯೂಲ್–VII

70. ಈ ಕೆಳಗಿನವುಗಳಲ್ಲಿ ಯಾವುದು ಸಂವಿಧಾನಾತ್ಮಕ ಸಂಸ್ಥೆಯಾಗಿದೆ?

(1) ಕೇಂದ್ರ ತನಿಖಾ ಆಯೋಗ

(2) ಸಿ.ವಿ.ಸಿ.

(3) ಕರ್ನಾಟಕ ಲೋಕ ಸೇವಾ ಆಯೋಗ

(4) ರಾಜ್ಯ ಮಹಿಳಾ ಆಯೋಗ

71. ಭಾರತ ಸಂವಿಧಾನದ ಯಾವ ವಿಧಿಯು ಸಂವಿಧಾನ ತಿದ್ದುಪಡಿಯ ವಿಧಾನವನ್ನು ತಿಳಿಸುತ್ತದೆ?

(1) 268ನೇ ವಿಧಿ

(2) 325ನೇ ವಿಧಿ

(3) 365ನೇ ವಿಧಿ

(4) 368ನೇ ವಿಧಿ

72. 'ಸಮಾಜವಾದಿ' ಹಾಗೂ 'ಜಾತ್ಯಾತೀತ' ಎಂಬ ಪದಗಳನ್ನು ಭಾರತ ಸಂವಿಧಾನದ ಪೂರ್ವಪೀಠಿಕೆಯಲ್ಲಿ ———— ಮೂಲಕ ಸೇರ್ಪಡಿಸಲಾಗಿದೆ.

(1) 42ನೇ ತಿದ್ದುಪಡಿ

(2) 44ನೇ ತಿದ್ದುಪಡಿ

(3) 23ನೇ ತಿದ್ದುಪಡಿ

(4) 24ನೇ ತಿದ್ದುಪಡಿ

73. ಭಾರತೀಯ ಸಂವಿಧಾನದ 263ನೇ ಅನುಚ್ಛೇದದ ಅಡಿಯಲ್ಲಿ ರಚಿಸಲಾದ ಅಂತರ ರಾಜ್ಯ ಪರಿಷತ್ತಿನ ಅಧ್ಯಕ್ಷರಾಗಿ ಯಾರು ಕಾರ್ಯನಿರ್ವಹಿಸುತ್ತಾರೆ?

(1) ಭಾರತದ ಪ್ರಧಾನ ಮಂತ್ರಿಗಳು

(2) ರಾಜ್ಯದ ಮುಖ್ಯ ಮಂತ್ರಿಗಳು

(3) ರಾಷ್ಟ್ರಪತಿಗಳು

(4) ಭಾರತದ ಮುಖ್ಯ ನ್ಯಾಯಾಧೀಶರು



Teachingninja.in

74. ಒಂದು ವಿಧೇಯಕವು ಧನ ವಿಧೇಯಕವೇ ಅಥವಾ ಅಲ್ಲವೇ ಎಂಬ ಯಾವುದೇ ಪ್ರಶ್ನೆ ಉದ್ಭವಿಸಿದರೆ ಯಾರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು?

(1) ಉಪ ಸಭಾಪತಿಯವರು

(2) ಸಭಾಪತಿಯವರು

(3) ರಾಷ್ಟ್ರಪತಿಯವರು

(4) ರಾಜ್ಯದ ರಾಜ್ಯಪಾಲರು

75. "ಯಾರೇ ವ್ಯಕ್ತಿಯನ್ನು ಒಂದೇ ಅಪರಾಧಕ್ಕಾಗಿ ಒಂದಕ್ಕಿಂತ ಹೆಚ್ಚು ಸಲ ಪ್ರಾಸಿಕ್ಯೂಷನ್‌ಗೆ ಗುರಿಪಡಿಸತಕ್ಕದಲ್ಲ ಹಾಗೂ ದಂಡಿಸತಕ್ಕದ್ದಲ್ಲ" – ಈ ನಿಯಮವನ್ನು ಭಾರತೀಯ ಸಂವಿಧಾನದಲ್ಲಿ ಯಾವ ಅನುಚ್ಛೇದದಲ್ಲಿ ಮಾತನಾಡಲಾಗಿದೆ?

(1) ಅನುಚ್ಛೇದ 20 (2)

(2) ಅನುಚ್ಛೇದ 19 (g)

(3) ಅನುಚ್ಛೇದ 21

(4) ಅನುಚ್ಛೇದ 22

76. ಕೆಳಗಿನ ಯಾರು ಅತೀ ಹೆಚ್ಚು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದವರು?

(1) ಪವನ್ ಕುಮಾರ್ ಚಾಮ್ಲಿಂಗ್

(2) ಜ್ಯೋತಿ ಬಸು

(3) ಗೇಗೆಂಗ್ ಅಪಾಂಗ್

(4) ಲಾಲ್ ಥಾನ್ಹವಾಲ

77. ಕೆಳಗಿನ ಯಾವ ದೇಶವು 36ನೇಯ 'ಆಸಿಯಾನ್' (ASEAN) ಸಮ್ಮೇಳನವನ್ನು ಆಯೋಜಿಸಿತ್ತು?

(1) ಜಪಾನ್

(2) ಭಾರತ

(3) ಚೀನಾ

(4) ವಿಯೆಟ್ನಾಂ

78. ಕೆಳಗಿನ ಯಾವ ದೇಶವು ಬ್ರಿಕ್ಸ್ ಕ್ರೀಡಾಕೂಟ (BRICS Games 2021) 2021ನ್ನು ಆಯೋಜಿಸುವ ಯೋಜನೆಯನ್ನು ಹಾಕಿಕೊಂಡಿದೆ?

(1) ಬ್ರೆಜಿಲ್

(2) ರಷ್ಯಾ

(3) ಭಾರತ

(4) ಚೀನಾ

79. ಕೆಳಗಿನ ಯಾವ ರಾಜ್ಯ ಪ್ರಥಮವಾಗಿ ಇ–ಕ್ಯಾಬಿನೆಟ್ ('e-cabinet')ನ್ನು ಜಾರಿಗೊಳಿಸಲು ನಿರ್ಧರಿಸಿದೆ?

(1) ಕೇರಳ

(2) ಹಿಮಾಚಲ ಪ್ರದೇಶ

(3) ಅಸ್ಸಾಂ

(4) ಕರ್ನಾಟಕ



Teachingninja.in

80. "ಬೆಂಗಳೂರು ತಾಂತ್ರಿಕ ಶೃಂಗ–2020"ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(A) ಈ ಶೃಂಗ ಸಭೆಯು ವಾಸ್ತವಿಕವಾಗಿ (Virtually) 2020ರ ನವೆಂಬರ್ 19 ರಿಂದ 21 ರವರೆಗೆ ಜರುಗಿತು.

(B) ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ವೀಡಿಯೋ ಕಾನ್ಫರೆನ್ಸ್ ಮೂಲಕ ಶೃಂಗಸಭೆಯನ್ನು ಉದ್ಘಾಟಿಸಿದರು

(C) ಶೃಂಗಸಭೆಯ ಧ್ಯೇಯವಾಕ್ಯ "ಮುಂದಿನದು ಈಗ".

ಈ ಮೇಲಿನ ಯಾವ ಹೇಳಿಕೆ/ಗಳು ಸರಿ? ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ.

(1) (A) ಮಾತ್ರ

(2) (A) ಮತ್ತು (B) ಮಾತ್ರ

(3) (A) ಮತ್ತು (C) ಮಾತ್ರ

(4) ಮೇಲಿನ ಎಲ್ಲವೂ

81. 2021ರ "ಕರ್ನಾಟಕ ಜನಸೇವಕ" ಯೋಜನೆಯು ________ ಗೆ ಸಂಬಂಧಿಸಿದೆ.

(1) ಸರ್ಕಾರಿ ಸೇವೆಗಳನ್ನು ಮನೆ ಮನೆಗೆ ತಲುಪಿಸುವುದು

(2) ಪ್ರತಿ ಗ್ರಾಮಕ್ಕೆ ಮುಖಂಡರನ್ನು ನೇಮಿಸುವುದು

(3) ಪೋಸ್ಟಲ್ ಜನಸೇವಕ ಪ್ರತಿನಿಧಿ

(4) ಸಾಲ ಒದಗಿಸಲು ಸರ್ಕಾರದ ಪ್ರತಿನಿಧಿ

82. ಕರ್ನಾಟಕದ 2011ರ ಜನಗಣತಿ ಪ್ರಕಾರ ಅಕ್ಷರಸ್ಥರ ಸಂಖ್ಯೆ ________

(1) 75.36

(2) 76.36

(3) 77.36

(4) 78.36

83. ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ.ಬಿ.ಎಸ್. ಯಡಿಯೂರಪ್ಪನವರು ದಿನಾಂಕ : 09-01-2021 ರಂದು ಜಾರಿಗೆ ತಂದ "ಕೃಷಿ ಸಂಜೀವಿನಿ" ಯೋಜನೆ ________ ಗೆ ಸಂಬಂಧಿಸಿದೆ.

(1) ನೀರಾವರಿ ಯೋಜನೆಯಲ್ಲಿ ರಿಯಾಯಿತಿ ನೀಡುವುದು

(2) ರೈತರಿಗೆ ಪಿಂಚಣಿ ಯೋಜನೆ

(3) ಮಣ್ಣು ಪರೀಕ್ಷೆ, ನೀರು ಮತ್ತು ರೋಗ ನಿವಾರಣೆ ಬಗ್ಗೆ ಕ್ರಮ ಕೈಗೊಳ್ಳುವುದು

(4) ರೈತರಿಗೆ ಸಾಲ ಒದಗಿಸುವುದು



Teachingninja.in

84. AVALOKANA ಜಾರಿಯಾದುದು

(1) 20 ಜನವರಿ 2021

(2) 26 ಜನವರಿ 2021

(3) 30 ಜನವರಿ 2021

(4) 31 ಜನವರಿ 2021

85. ಕೆಳಗಿನವುಗಳಲ್ಲಿ ಭಾರತ ತಯಾರಿಸಿದ ಕೋವಿಡ್ ಲಸಿಕೆಗಳನ್ನು ಮೊದಲು ಪಡೆದ ದೇಶ ಯಾವುದು?

(1) ಬಾಂಗ್ಲಾದೇಶ

(2) ಮಾಲ್ಡೀವ್ಸ್

(3) ಭೂತಾನ್

(4) ಮಯನ್ಮಾರ್

86. ಭಾರತ ಸರ್ಕಾರ ಶಿಕ್ಷಣದ ಮೇಲು ತೆರಿಗೆಯಿಂದ ಬರುವ ಆದಾಯವನ್ನು ಈ ಕೆಳಕಂಡ ಶಿಕ್ಷಣದ ಮೇಲಿನ ವೆಚ್ಚಕ್ಕಾಗಿ ಮೀಸಲಿಡುತ್ತದೆ.

(1) ಉನ್ನತ ಶಿಕ್ಷಣ

(2) ಪ್ರಾಥಮಿಕ ಶಿಕ್ಷಣ

(3) ಮಾಧ್ಯಮಿಕ ಶಿಕ್ಷಣ

(4) ಮೇಲಿನವುಗಳಲ್ಲಿ ಯಾವುದೂ ಅಲ್ಲ

87. ವಿಸ್ತರಿಸಿ : MPCE

(1) ಮಾಸಿಕ ತಲಾ ಅನುಭೋಗ ವೆಚ್ಚ (Monthly Per Capita Consumption Expenditure)

(2) ಮಾಸಿಕ ತಲಾ ಅನುಭೋಗ ಗಳಿಕೆ (Monthly Per Capita Consumption Earnings)

(3) ಮಾಸಿಕ ತಲಾ ಉತ್ಪಾದನಾ ವೆಚ್ಚ (Monthly Per Capita Production Expenditure)

(4) ಮೇಲಿನವುಗಳಲ್ಲಿ ಯಾವುದೂ ಅಲ್ಲ

88. ನೇರ ತೆರಿಗೆಗೆ ಉದಾಹರಣೆ

(1) ವೈಯಕ್ತಿಕ ಆದಾಯದ ಮೇಲಿನ ತೆರಿಗೆ

(2) ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ

(3) (1) ಮತ್ತು (2) ಸಹ ಸರಿ

(4) (1) ಮತ್ತು (2) ಸಹ ತಪ್ಪು

89. GDPಗೆ ಕೃಷಿ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳು ನೀಡಿದ ಕೊಡುಗೆ ಆರ್ಥಿಕತೆಯ ________ ಆಗಿದೆ.

(1) ವಿನ್ಯಾಸ

(2) ರಚನಾತ್ಮಕ ಉತ್ಪಾದಕತೆ

(3) ಪ್ರತಿಷ್ಠಾನ

(4) ರಚನಾತ್ಮಕ ಸಂಯೋಜನೆ



Teachingninja.in

**90.** "ಭಾರತ ಮತ್ತು ಜ್ಞಾನ ಆರ್ಥಿಕತೆ : ಸಾಮರ್ಥ್ಯ ಮತ್ತು ಅವಕಾಶಗಳನ್ನು ನಿಯಂತ್ರಿಸುವುದು" ಎಂಬ ಶೀರ್ಷಿಕೆಯ ವರದಿಯನ್ನು ಯಾರು ಪ್ರಕಟಿಸಿದರು?

(1) ಆರ್.ಬಿ.ಐ.

(2) NITI ಆಯೋಗ್

(3) ವಿಶ್ವ ಬ್ಯಾಂಕ್

(4) ಇವುಗಳಲ್ಲಿ ಯಾವುದೂ ಅಲ್ಲ

**91.** ಹಸಿರು ಕ್ರಾಂತಿಯ ಮೊದಲ ಹಂತದಲ್ಲಿ, HYV ಬೀಜಗಳ ಬಳಕೆಯು ಪ್ರಾಥಮಿಕವಾಗಿ __________ ಬೆಳೆಯುತ್ತಿರುವ ಪ್ರದೇಶಗಳಿಗೆ ಮಾತ್ರ ಪ್ರಯೋಜನವನ್ನು ನೀಡಿತು.

(1) ಗೋಧಿ

(2) ಹತ್ತಿ

(3) ಕಬ್ಬು

(4) ರಾಗಿ

**92.** ಭಾರತೀಯ GST ಕೌನ್ಸಿಲ್ __________ ನೇತೃತ್ವದಲ್ಲಿದೆ.

(1) ರಾಷ್ಟ್ರಪತಿಗಳು

(2) ಪ್ರಧಾನ ಮಂತ್ರಿಗಳು

(3) ಹಣಕಾಸು ಸಚಿವರು

(4) ಗೃಹ ಸಚಿವರು

**93.** 2011ರ ಜನಗಣತಿಯ ಪ್ರಕಾರ, ಈ ಕೆಳಗಿನ ಕರ್ನಾಟಕದ ಯಾವ ಜಿಲ್ಲೆಯಲ್ಲಿ ಅತೀ ಕಡಿಮೆ ಶೇಕಡಾವಾರು ಬಡತನವನ್ನು ಹೊಂದಿದೆ?

(1) ದಕ್ಷಿಣ ಕನ್ನಡ

(2) ಬೆಂಗಳೂರು ನಗರ

(3) ಕೊಡಗು

(4) ಉತ್ತರ ಕನ್ನಡ

**94.** ಆತ್ಮನಿರ್ಭರ ಭಾರತ್ 3.0 ಪ್ಯಾಕೇಜ್ __________ ದಿನಾಂಕದಂದು ಪ್ರಕಟಿಸಲಾಗಿದೆ.

(1) 12ನೇ ಮೇ 2020

(2) 12ನೇ ಅಕ್ಟೋಬರ್ 2020

(3) 12ನೇ ನವೆಂಬರ್ 2020

(4) 12ನೇ ಡಿಸೆಂಬರ್ 2020

**95.** ನಗದು ಮೀಸಲು ಅನುಪಾತ (CRR) ಎಂದರೇನು?

(1) ವಾಣಿಜ್ಯ ಬ್ಯಾಂಕಿನ ಒಟ್ಟು ಠೇವಣಿಯ ಭಾಗವನ್ನು ಸ್ವತಃ ತನ್ನಲ್ಲಿಯೇ ಇಡಬೇಕು

(2) ವಾಣಿಜ್ಯ ಬ್ಯಾಂಕಿನ ಒಟ್ಟು ಠೇವಣಿಯ ಭಾಗವನ್ನು, ಆರ್‌ಬಿಐನಲ್ಲಿ ಇಡಬೇಕು

(3) ವಾಣಿಜ್ಯ ಬ್ಯಾಂಕುಗಳು ತಮ್ಮ ಒಟ್ಟು ಠೇವಣಿಯ ಭಾಗವನ್ನು ಚಿನ್ನದ ರೂಪದಲ್ಲಿ ಹೊಂದುವುದು

(4) ಮೇಲಿನ ಯಾವುದೂ ಅಲ್ಲ



Teachingninja.in

**96.** ಎಮ್‌ಯುಡಿಆರ್‌ಎ ಎಂದರೆ

(1) ಮ್ಯಾಕ್ರೋ ಯುನಿಟ್ಸ್ ಡೆವಲಪ್‌ಮೆಂಟ್ ಮತ್ತು ರಿಫೈನಾನ್ಸ್ ಏಜೆನ್ಸಿ ಬ್ಯಾಂಕ್

(2) ಮೀಡಿಯಮ್ ಯುನಿಟ್ಸ್ ಡೆವಲಪ್‌ಮೆಂಟ್ ಮತ್ತು ರಿಫೈನಾನ್ಸ್ ಏಜೆನ್ಸಿ ಬ್ಯಾಂಕ್

(3) ಮೈಕ್ರೋ ಯುನಿಟ್ಸ್ ಡೆವಲಪ್‌ಮೆಂಟ್ ಮತ್ತು ರಿಫೈನಾನ್ಸ್ ಏಜೆನ್ಸಿ ಬ್ಯಾಂಕ್

(4) ಮೈಕ್ರೋ ಯುನಿಟ್ಸ್ ಡೆವಲಪ್‌ಮೆಂಟ್ ಮತ್ತು ರಿಪ್ಲೇಸ್‌ಮೆಂಟ್ ಏಜೆನ್ಸಿ ಬ್ಯಾಂಕ್

**97.** ಮಾನವ ಅಭಿವೃದ್ಧಿ ಸೂಚ್ಯಂಕವು ——— ಆಯಾಮಗಳ ಒಟ್ಟು ಅಭಿವೃದ್ಧಿಯ ಪ್ರಗತಿಯ ಅಳತೆಯಾಗಿದೆ.

(1) ಮೂರು

(2) ನಾಲ್ಕು

(3) ಎರಡು

(4) ಐದು

**98.** ಪಿಪಿಪಿಪಿ ಎಂದರೆ

(1) ಪಬ್ಲಿಕ್ ಪ್ರೈವೇಟ್ ಪಾರ್ಟಿ ಪಾರ್ಟ್‌ನರ್‌ಶಿಪ್

(2) ಪಬ್ಲಿಕ್ ಪ್ರೈವೇಟ್ ಪಾರ್ಟ್‌ನರ್‌ಶಿಪ್ ಪುಷ್

(3) ಪಬ್ಲಿಕ್ ಪೀಪಲ್ ಪೊಲಿಟಿಕಲ್ ಪಾರ್ಟ್‌ನರ್‌ಶಿಪ್

(4) ಪಬ್ಲಿಕ್ ಪ್ರೈವೇಟ್ ಪೀಪಲ್ ಪಾರ್ಟ್‌ನರ್‌ಶಿಪ್

**99.** ಕರ್ನಾಟಕದ ಈ ಕೆಳಗಿನ ಸ್ಥಳಗಳನ್ನು ಪರಿಗಣಿಸಿ.

(A) ಮೊಳಕಾಲ್ಮೂರು

(B) ಗಂಗಾವತಿ

(C) ಕಾರವಾರ

(D) ಮೈಸೂರು

ಈ ಮೇಲಿನ ಸ್ಥಳಗಳಲ್ಲಿ ಯಾವುದು ಸಾಂಪ್ರದಾಯಿಕ ಸೀರೆಗಳನ್ನು ಉತ್ಪಾದಿಸುವಲ್ಲಿ ಪ್ರಸಿದ್ಧಿಯಾಗಿವೆ?

(1) (A) ಮಾತ್ರ

(2) (B), (C) ಮತ್ತು (D)

(3) (A) ಮತ್ತು (D)

(4) (D), (A) ಮತ್ತು (C)

**100.** ಹೊಂದಿಸಿ ಬರೆಯಿರಿ.

| | |
|---|---|
| (A) ಆದಿಚುಂಚನಗಿರಿ | (i) ಪಕ್ಷಿಧಾಮ |
| (B) ಮಂಡಗದ್ದೆ | (ii) ರಾಷ್ಟ್ರೀಯ ಉದ್ಯಾನವನ |
| (C) ನಾಗರಹೊಳೆ | (iii) ಎಲೆ ಉದುರುವ ಕಾಡುಗಳು |
| (D) ಶ್ರೀಗಂಧದ ಮರ | (iv) ನವಿಲು ಧಾಮ |
| (E) ಪಶ್ಚಿಮ ಘಟ್ಟಗಳು | (v) ನಿತ್ಯಹರಿದ್ವರ್ಣ ಕಾಡುಗಳು |

| | (A) | (B) | (C) | (D) | (E) |
|---|---|---|---|---|---|
| (1) | (i) | (ii) | (iii) | (iv) | (v) |
| (2) | (iv) | (i) | (ii) | (iii) | (v) |
| (3) | (iv) | (i) | (v) | (iii) | (ii) |
| (4) | (iv) | (v) | (ii) | (i) | (iii) |



Teachingninja.in